**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.4111/2023**

**ಪಿರ್ಯಾದಿ** : ಬೀರೂರು ಪೊಲೀಸ್

**-ವಿರುದ್ಧ-**

**ಆರೋಪಿ** : ರಾಜಪ್ಪ ಬಿನ್ ಮೈಲಾರಪ್ಪ,
68 ವರ್ಷ, ಕೂಲಿ ಕೆಲಸ,
ವಾಸಃ ಅಂಬೇಡ್ಕರ್ ನಗರ, ಸರಸ್ವತಿ
ಪುರಂ, ಬೀರೂರು ಟೌನ್, ಕಡೂರು
ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿಯ ಹೇಳಿಕೆ**

ಪ್ರಃ1) ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

**ಉತ್ತರಃ ಹೌದು.**

ಪ್ರಃ2) ಚಾಸಾ-4 ಮಾರುತಿ ಹೆಚ್.ಸಿ. ಇವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 06.08.2023 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ಮತ್ತು 5 ರವರು ಬೀರೂರು ಪಟ್ಟಣದ ಶಿವಾಜಿ ವೃತ್ತದ ಬಳಿ ಗಸ್ತಿನಲ್ಲಿರುವಾಗ ಬಾತ್ಮಿದಾರರಿಂದ ಬೀರೂರು - ಚಿಕ್ಕಮಗಳೂರು ರಸ್ತೆಯ ಎ1 ಚಿಕನ್ ಸೆಂಟರ್ ಪಕ್ಕದ ಮಣ್ಣಿನ ರಸ್ತೆಯಲ್ಲಿ ಒಬ್ಬ ಆಸಾಮಿಯು ಒಂದು ಬಿಳಿ ಬಣ್ಣದ ಪ್ಲಾಸಿಕ್ ಚೀಲದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ವಿಷಯವನ್ನು ಚಾಸಾ-1 ರವರು ನನಗೆ ತಿಳಿಸಿ ಅಲ್ಲೇ ಸ್ಥಳದಲ್ಲಿ ಮಾತನಾಡಿಕೊಂಡು ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಕರೆಸಿ ಪರಿಚಯ ಮಾಡಿಕೊಂಡು ಚಾಸಾ-1 ರವರು ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸುವಂತೆ ಅವರ ಬಳಿ ಕೇಳಿ ಅವರು ಒಪ್ಪಿಕೊಂಡ ಮೇರೆಗೆ ಚಾಸಾ-1 ರವರು ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ3) ಪ್ರಾಸಾ-1 ರವರು ಮುಂದುವರೆದು, ರಾತ್ರಿ 7.15 ಗಂಟೆಗೆ ಎ 1 ಚಿಕನ್ ಅಂಗಡಿ ಪಕ್ಕದ ಮಣ್ಣಿನ ರಸ್ತೆಯ ಬಳಿ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಪಟ್ಟಿದ್ದು, ನಾನು ಆತನನ್ನು ಹಿಡಿದು ಅವನ ಬಳಿ ಇದ್ದ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪರಿಶೀಲಿಸಿ ನೋಡಲಾಗಿ 90 ಎಂಎಲ್ ನ ನಂ1 ಹೈವೈ ಡಿಲಕ್ಸ ಫೈನ್ ವಿಸ್ಕಿ ಎಂದು ಬರೆದಿರುವ 35 ಮದ್ಯದ ಪೌಚುಗಳು ಇದ್ದು, ಅವುಗಳ ಪೈಕಿ 20 ಪೌಚುಗಳ ಮೇಲೆ ಬ್ಯಾಚ್ ನಂ 34 ಎಂದು ಹಾಗೂ 15 ಪೌಚುಗಳ ಮೇಲೆ ಬ್ಯಾಚ್ ನಂ 555 ಎಂದು ಬರೆದಿದ್ದು, ಅವುಗಳ ಒಟ್ಟು ಮೌಲ್ಯ ರೂ. 979-00 ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ4) ಪ್ರಾಸಾ-1 ರವರು ಮುಂದುವರೆದು, ಆತನ ಬಳಿ ಚಾಸಾ-1 ರವರು ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ರಾಜಪ್ಪ ಬಿನ್ ಮೈಲಾರಪ್ಪ, ಬೀರೂರು ವಾಸಿ ಎಂದು ತಿಳಿಸಿದ್ದು, ನಿಮಗೆ ಮದ್ಯ ಮಾರಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಲಾಗಿ ಯಾವುದೇ ಪರವಾನಗಿ ಇಲ್ಲಾ ಎಂದು ತಿಳಿಸಿದ್ದು, ನಂತರ ಮದ್ಯದ ಪೌಚುಗಳನ್ನು ಅದೇ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಪಿ ಎಂಬ ಅಕ್ಷರದ ಸೀಲು ಮಾಡಿ ಒಂದು ಬಿಳಿ ಬಣ್ಣದ ಚೀಟಿಯಲ್ಲಿ ಕೇಸಿನ ವಿವರ ಬರೆದು ಪಂಚರ ಮತ್ತು ಚಾಸಾ-1 ರವರು ಸಹಿ ಮಾಡಿ ಬಿಳಿ ಚೀಲಕ್ಕೆ ಅಂಟಿಸಿದ್ದು, ಮಹಜರನ್ನು ರಾತ್ರಿ 7.15 ರಿಂದ 8.15 ರವರೆಗೆ ಬೀದಿ ದೀಪದ ಬೆಳಕಿನ ಸಹಾಯದಿಂದ ಮಾಡಿ ಚಾಸಾ-1 ರವರು ಆರೋಪಿ ಮತ್ತು ಮದ್ಯವನ್ನು ವಶಪಡಿಸಿಕೊಂಡು ಠಾಣೆಗೆ 8.30 ಗಂಟೆಗೆ ಬಂದು ವರದಿಯನ್ನು ತಯಾರಿಸಿ ಠಾಣಾಧಿಕಾರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ5) ಚಾಸಾ-9 ಸಜಿತ್ ಕುಮಾರ್ ಜಿ.ಆರ್. ಇವರನ್ನು ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 06.08.2023 ರಂದು ಪ್ರಕರಣದ ಕಡತವನ್ನು ಚಾಸಾ-8 ರವರಿಂದ ಮುಂದಿನ ತನಿಖೆಗಾಗಿ ಪಡೆದಿದ್ದು, ದಿಃ06.08.2023 ರಂದು ಸಾಕ್ಷಿದಾರರಾದ ಚಾಸಾ-2 ರಿಂದ 5 ರವರ ಹೇಳಿಕೆಯನ್ನು ದಾಖಲಿಸಿದ್ದು, ದಿಃ02.09.2023 ರಂದು ವಶಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಚಾಸಾ-7 ರವರಿಗೆ ಕೋರಿಕೆ ಪತ್ರದೊಂದಿಗೆ

ನೀಡಿದ್ದು, ಚಾಸಾ-6 ರವರಿಗೆ ಘಟನಾ ಸ್ಥಳದಲ್ಲಿ ವಿದ್ಯುತ್ ಕಂಬ ಇರುವ ಬಗ್ಗೆ ಹಾಗೂ ಸದರಿ ವಿದ್ಯುತ್ ಕಂಬದಲ್ಲಿ ವಿದ್ಯುತ್ ಇದ್ದ ಬಗ್ಗೆ ಮಾಹಿತಿ ನೀಡುವಂತೆ ಕೋರಿಕೆ ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ6) ಪ್ರಾಸಾ-4 ರವರು ಮುಂದುವರೆದು, ದಿಃ 27.09.2023 ರಂದು ಚಾಸಾ-6 ರವರಿಂದ ವರದಿ ಸ್ವೀಕರಿಸಿದ್ದು, ದಿಃ 27.09.2023 ರಂದು ಚಾಸಾ-7 ರವರಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀರಿಕಸಿ ಕಡತಕ್ಕೆ ಅಳವಡಿಸಿಕೊಂಡು ಆರೋಪಿ ವಿರುದ್ಧ ಆರೋಪ ಸಾಬೀತಾದ್ದರಿಂದ ಅದೇ ದಿನ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ7) ಚಾಸಾ-8 ಗಿರೀಶನಾಯ್ಕ ಇವರನ್ನು ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ,ದಿಃ 06.08.2023 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ-1 ರವರು ನೀಡಿದ ವರದಿ ಮಾಲು ಮತ್ತು ಆರೋಪಿಯನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 121/2023 ರಂತೆ ಪ್ರಕರಣ ದಾಖಲು ಮಾಡಿ ನಿಪಿ-11 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ರವಾನಿಸಿದ್ದು, ನಿಪಿ-12 ರಂತೆ ಆರೋಪಿಗೆ ಭಾ ದಂ ಸಂ ಪ್ರ 41 ಎ ರಂತೆ ನೋಟಿಸು ನೀಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ವಶಪಡಿಸಿಕೊಂಡ ಮುದ್ದೆ ಮಾಲನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ಆರೋಪಿ ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ8) ಚಾಸಾ-1 ಬಸವರಾಜು ಹೆಚ್ ಇವರನ್ನು ಪ್ರಾಸಾ-6 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 06.08.2023 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನಾನು ಬೀರೂರು ಪಟ್ಟಣದ ಶಿವಾಜಿ ಸರ್ಕಲ್ ನಲ್ಲಿ ಗಸ್ತಿನಲ್ಲಿರುವಾಗ ಬೀರೂರು ಪಟ್ಟಣದ ಅಜ್ಜಂಪುರ ರಸ್ತೆಯಲ್ಲಿರುವ ಎ 1 ಚಿಕನ್ ಸೆಂಟರ್ ಪಕ್ಕದ ಮಣ್ಣಿನ ರಸ್ತೆಯಲ್ಲಿ ಒಬ್ಬ ಆಸಾಮಿಯು

ಅಕ್ರಮವಾಗಿ ಮದ್ಯವನ್ನು ಹಿಡಿದುಕೊಂಡು ನಿಂತಿರುವುದಾಗಿ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಬಂದಿದ್ದು, ಇದು ದಾಳಿಯ ಪ್ರಕರಣವಾದ್ದರಿಂದ ಶೋಧನಾ ವಾರೆಂಟನ್ನು ಪಡೆದು ದಾಳಿ ನಡೆಸಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ ಹಾಗೂ ಆರೋಪಿ ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದುದರಿಂದ ಶೋಧನಾ ವಾರೆಂಟನ್ನು ಪಡೆಯದೇ ಅಬಕಾರಿ ಕಾಯ್ದೆ ಕಲಂ 54 ರಡಿ ಪದದತ್ತವಾದ ಅಧಿಕಾರವನ್ನು ಬಳಸಿ ಕೂಡಲೇ ದಾಳಿಗೆ ಹೊರಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ9) ಪ್ರಾಸಾ-6 ರವರು ಮುಂದುವರೆದು, ಬೀರೂರಿನ ಶಿವಾಜಿ ಸರ್ಕಲ್ ಬಳಿ ಮಾತನಾಡುತ್ತಾ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಕರೆದು ಪರಿಚಯ ಮಾಡಿಕೊಂಡು ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು, ಅವರು ಒಪ್ಪಿದ ಮೇರೆಗೆ ನಿಪಿ-3 ರಂತೆ ನೋಟಿಸನ್ನು ಜಾರಿ ಮಾಡಿದ್ದು, ನಂತರ ಅವರನ್ನು ತಮ್ಮೊಂದಿಗೆ ಕರೆದುಕೊಂಡು ಸಂಜೆ 7.15 ಗಂಟೆ ಸಮಯಕ್ಕೆ ಸಿಬ್ಬಂದಿಯವರೊಂದಿಗೆ ಎ1 ಚಿಕನ್ ಸೆಂಟರ್ ಬಳಿ ಹೋಗಿ ನೋಡಲಾಗಿ ಒಬ್ಬ ಆಸಮಿಯು ಒಂದು ಚೀಲವನ್ನು ಇಟ್ಟುಕೊಂಡು ನಿಂತಿದ್ದು ಸದರಿ ಆಸಾಮಿಯು ತಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ10) ಪ್ರಾಸಾ-6 ರವರು ಮುಂದುವರೆದು, ಚಾಸಾ-4 ರವರು ಆತನನ್ನು ಹಿಡಿದುಕೊಂಡು ಆತನು ಹಿಡಿದುಕೊಂಡಿದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಿದಾಗ ಅದರಲ್ಲಿ ಮದ್ಯದ ಪೌಚುಗಳು ಇದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರು ಜನಿತ್ ಬಿನ್ ನಂಜುಂಡೇಗೌಡ ಎಂದು ತಿಳಿಸಿದ್ದು, ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿದ್ದು, ಆತನ ಬಳಿ ಮದ್ಯ ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯಾ ಎಂದು ಕೇಳಲಾಗಿ ಆತ ಯಾವುದೇ ಪರವಾನಗಿ ಇಲ್ಲಾ ಎಂದು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ11) ಪ್ರಾಸಾ-6 ರವರು ಮುಂದುವರೆದು, ಆತನು ಪರವಾನಗಿ ಇಲ್ಲದೇ

ಅಕ್ರಮವಾಗಿ ಮದ್ಯವನ್ನು ಹೊಂದಿದ್ದರಿಂದ ಆತನ ಬಳಿ ಇದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಸದರಿ ಚೀಲವು ಬಿಳಿ ಬಣ್ಣದ ಚೀಲವಾಗಿದ್ದು, ಸದರಿ ಚೀಲದಲ್ಲಿ ಇದ್ದ ಮದ್ಯವನ್ನು ನೆಲದ ಮೇಲೆ ಸುರಿದು ನೋಡಿದಾಗ 90 ಎಂಎಲ್ ನ ನಂ 1 ಹೈ ವೈ ಡಿಲಕ್ಸ್ 35 ಪೌಚುಗಳು ಇದ್ದು ಅವುಗಳ ಪೈಕಿ 20 ಪೌಚುಗಳ ಮೇಲೆ ಬ್ಯಾಚ್ ನಂ 34 ಎಂದು ಬರೆದಿದ್ದು, 15 ಪೌಚುಗಳ ಮೇಲೆ ಬ್ಯಾಚ್ ನಂ 551 ಎಂದು ನಮೂದಾಗಿದ್ದು, ಇವುಗಳ ಒಟ್ಟು ಅಂದಾಜು ಬೆಲೆ ರೂ.979-00 ಆಗಿರುತ್ತದೆ ಎಂದು ಪಂಚರು ಅಭಿಪ್ರಾಯ ಪಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ12) ಪ್ರಾಸಾ-6 ರವರು ಮುಂದುವರೆದು, ಮದ್ಯವನ್ನು ಅದೇ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಬಾಯನ್ನು ದಾರದಿಂದ ಕಟ್ಟಿ ಪಿ ಎಂಬ ಸೀಲು ಮಾಡಿ ಕೇಸಿನ ವಿವರವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದು ಪಂಚರ ಸಹಿ ಪಡೆದು ತಾನು ಸಹಿ ಮಾಡಿ ಚೀಲದ ಮೇಲೆ ಅಂಟಿಸಿ ಸಂಜೆ 7.15 ರಿಂದ 8.15 ರವರೆಗೆ ನಿಪಿ-1 ರಂತೆ ಮಹಜರು ಕ್ರಮ ಜರುಗಿಸಿ ಮದ್ಯ ತುಂಬಿದ್ದ ಪ್ಲಾಸ್ಟಿಕ್ ಚೀಲವನ್ನು ವಶಕ್ಕೆ ಪಡೆದು ರಾತ್ರಿ 8.30 ಗಂಟೆಗೆ ಠಾಣೆಗೆ ಬಂದು ನಿಪಿ-10 ರಂತೆ ವರದಿ ತಯಾರಿಸಿ ರಾತ್ರಿ 9.00 ಗಂಟೆಗೆ ಠಾಣಾಧಿಕಾರಿಯಾದ ಚಾಸಾ-8 ರವರಿಗೆ ಮುಂದಿನ ಕ್ರಮಕ್ಕಾಗಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಪ್ರಃ13) ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುವುದೇನಾದರೂ ಇದೆಯೇ?

**ಉತ್ತರಃ ಇಲ್ಲ.**

ಪ್ರಃ14) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

**ಉತ್ತರಃ ಇಲ್ಲ.**

(ಈ ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರಃ ಸುಳ್ಳುವನ್ನು ಯಥವತ್ತಾಗಿ ಬರೆದುಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸಿದ್ದೇನೆ.)

ದಿನಾಂಕ : 25.02.2026.

ಸಹಿ/-

(ತಾಹಾಕಲೀಲ್ ಕೆ.ಎ.)
ಸಿ/ಸಿ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕಡೂರು.

**ಆರೋಪಿ ಸಹಿಃ**